ಅಧ್ಯಕ್ಷರು: ಜೀಪಿಗೂ ಇದಕ್ಕೂ ಸಂಬಂಧವಿಲ್ಲ.. ಮುಂದಿನ ಪ್ರಶ್ನೆ...

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ

152(1363) - ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 11-10-99ರಿಂದ ತಹಲ್‌ವರೆಗೆ ಕಳಪೆ ಕಾಮಗಾರಿ ಮಾಡಿರುವ (ರಸ್ತೆ, ಕಟ್ಟಡ ಇತ್ಯಾದಿ) ಪ್ರಕರಣಗಳು ಎಷ್ಟು? ಇದರಲ್ಲಿ ಎಷ್ಟು ಪ್ರಕರಣಗಳು ಸಾಬೀತಾಗಿದೆ? ತಪ್ಪಿತಸ್ಥರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ:

ಆ) ಕಳಪೆ ಕಾಮಗಾರಿಯಿಂದ ನಿರ್ಮಾಣ ಮಾಡಿರುವ ಮನೆಗಳನ್ನು ಮಾರಾಟ ಮಾಡಿರುವ ಪ್ರಕರಣಗಳು ಎಷ್ಟು? ಎಷ್ಟನ್ನು ಫಲಾನುಭವಿಗಳಿಗೆ ನೀಡಲಾಗಿದೆ? ಎಷ್ಟು ಹಣ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ?

ಇ) ತಪ್ಪಿತಸ್ಥರ ವಿರುದ್ಧ ಎಷ್ಟು ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲಾಗಿದೆ. ಯಾರ ಯಾರ ವಿರುದ್ಧ ಹೂಡಲಾಗಿದೆ?

ಈ) ಈ ಪ್ರಕರಣಗಳ ಶೀಘ್ರ ವಿಲೇವಾರಿಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ಜನಗಳು ಬಹಳ ಕಷ್ಟಪಟ್ಟು ನಮ್ಮಲ್ಲಿ ದೂರು ತಂದು ಕೊಟ್ಟು ಇದರ ಬಗ್ಗೆ ವಿವರವನ್ನು ವಿಧಾನ ಸಭೆಯಲ್ಲಿ ಪಡೆದುಕೊಳ್ಳಿ ಎಂದು ಹೇಳಿದಾಗ ನಾವು ಇಲ್ಲಿ ಪ್ರಶ್ನೆ ಹಾಕಿದಾಗ ಸರ್ಕಾರದವರು ಕೊಟ್ಟ ಉತ್ತರವನ್ನು ನೋಡಿದರೆ ಮನಸ್ಸಿಗೆ ಬಹಳ ನೋವು ಆಗುತ್ತದೆ. ನಮ್ಮಲ್ಲಿ ಲೆಟರ್ಸ್‌ಗಳನ್ನು, ಎವಿಡೆನ್ಸ್‌ಗಳನ್ನು ಕೊಟ್ಟಿದ್ದಾರೆ. ಇಡೀ ಕಡತವನ್ನೇ ಕೊಟ್ಟಿದ್ದಾರೆ. ಆದರೆ ಇವರು ಉತ್ತರ ಏನು ಹೇಳುತ್ತಾರೆ ಎಂದರೆ "ಇಲ್ಲ" ಕೊನೇಪಕ್ಷ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದಾದರೂ ಹೇಳಿ, I do agree ಆದರೆ "ಇಲ್ಲ" "ಇಲ್ಲ" "ಇಲ್ಲ" ಎಂದು ಮೂರು ಪ್ರಶ್ನೆಗಳಿಗೂ ಇವರ ಅಧಿಕಾರಿಗಳು ಬರೆದಿದ್ದಾರಲ್ಲಾ ಇದು ಹೇಗೆ? Who is the Officer who is not bothered to look into the files ನಾನು ಬೇಕಾದಷ್ಟು ಫೈಲ್ ತಂದು ಕೊಡಲೇ? simply you have said: "ಇಲ್ಲ" "ಇಲ್ಲ" "ಇಲ್ಲ" ಹಾಗಾದರೆ ಅರ್ಥ ಏನು? 'Does not arise' ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಉದ್ಭವಿಸುವುದಿಲ್ಲ ಅಂದರೆ I agree. Not concerned, agreed. ಮಾನ್ಯ ಮಂತ್ರಿಗಳಿಗೆ ನಾನು ಮನವಿ ಮಾಡುವುದು ಇಷ್ಟೇ. They should be very assertive, categorical ಅದನ್ನು ಎಕ್ಸಾಮಿನ್ ಮಾಡಿಸಿ ಉತ್ತರ ಕೊಡುವಂಥದ್ದು That is a commitment on our part; ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ, ಒಂದು ವಿಚಾರವನ್ನು ಹೇಳಬಯಸುತ್ತೇನೆ, ಎಷ್ಟು ಪ್ರಕರಣಗಳು ಸಾಬೀತಾಗಿವೆ ಎಂದು ಕೇಳಿದರೆ ಅದಕ್ಕೆ ಉತ್ತರವೇ ಇಲ್ಲ, ಎಲ್ಲಾ ಮೂರು ಪ್ರಶ್ನೆಗೂ ಸೇರಿ ಒಂದೇ ಉತ್ತರ "ಇಲ್ಲ" ವೆಂದು ಕೊಟ್ಟಿದ್ದಾರೆ, ಎಲ್ಲರೂ

ಹೀಗೆ ಕೊಟ್ಟರೆ ನಮ್ಮ ಗತಿ ಏನು? Next, I come to the point ನಾನು (ಅ) ಪ್ರಶ್ನೆ ಕೇಳಿದರೆ "ಇಲ್ಲ" ವೆಂದು ಕೊಟ್ಟಿದ್ದಾರೆ.

ಅಧ್ಯಕ್ಷರು: ಆಯಿತು ಎಷ್ಟು ಸಾರಿ ಇಲ್ಲವೆಂದು ಹೇಳುತ್ತೀರಿ? ಪುನಃ ಕಡತ ತರಿಸಿ ವೆರಿಫೈ ಮಾಡಿ ಎಂದು ಹೇಳಿ.

ಶ್ರೀ ಎ.ಎಸ್. ಗುರುಸ್ವಾಮಿ: ನನಗೆ ಅವಕಾಶ ಸಿಗುವುದು ಬಹಳ ಕಡಿಮೆ ದಯಮಾಡಿ ಅವಕಾಶ ಮಾಡಿಕೊಡಿ, ಮುಂದೆಯಾದರೂ ಸರಿಯಾಗಲಿ ಎಂದು ನಾನು ಹೇಳುತ್ತಿದ್ದೇನೆ ಬೇರೆ ಉದ್ದೇಶ ಏನೂ ಇಲ್ಲ.

ಅಧ್ಯಕ್ಷರು: ಇನ್ನೊಂದು ಸಲ ಕಡತ ತರಿಸಿ ನೋಡಿ ಎಂದು ಹೇಳಿ.

ಶ್ರೀ ಎ ಎಸ್. ಗುರುಸ್ವಾಮಿ: ನಮ್ಮಲ್ಲಿ ಆಶಾಮಂದಿರದಲ್ಲಿ ಕ್ಯಾಮಾರನೇಹಳ್ಳಿ 1ನೇ ಮತ್ತು 2ನೇ ಸ್ಟೇಜ್‌ನಲ್ಲಿ ಸುಮಾರು 740 ಮನೆಗಳು ಕುಸಿದಿವೆ.

ಅಧ್ಯಕ್ಷರು: ತಾವು ದಯಮಾಡಿ ಸಪ್ಲಿಮೆಂಟರಿ ಕೇಳಿ. ಭಾಷಣ ಬೇಡಿ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿಯವರು ಕೇಳಿರತಕ್ಕಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ನನ್ನ ಹತ್ತಿರ ಇರತಕ್ಕಂಥ ಮಾಹಿತಿಯನ್ನು ಅವರಿಗೆ ಕೊಟ್ಟಿದ್ದೇನೆ. ಈ ಉತ್ತರದಿಂದ ಅವರಿಗೆ ಸಮಾಧಾನವಾಗಿಲ್ಲ. ಅವರ ಹತ್ತಿರ ಇರತಕ್ಕಂಥ ಮಾಹಿತಿಗಳನ್ನು ಕೊಟ್ಟರೆ, ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಆ ನಂತರ ಮಾನ್ಯ ಸದಸ್ಯರಿಗೆ ಸಮಾಧಾನವಾಗಬಹುದೆಂದು ಕಾಣುತ್ತದೆ. ನನಗೂ ಸಹಿತ ಈ ಪ್ರಶ್ನೆಗೆ ಸ್ವಲ್ಪ ಉತ್ತರ ಸಮರ್ಪಕವಾಗಿಲ್ಲ ಎನ್ನತಕ್ಕಂಥದ್ದು ಮನವರಿಕೆಯಾಗಿದೆ. ಆದ್ದರಿಂದ, ನಾನು ಮೈಸೂರಿಗೆ ಹೋದಂಥ ಸಂದರ್ಭದಲ್ಲಿ ಸದರಿ ಸ್ಥಳಕ್ಕೆ ಭೇಟಿ ನೀಡುವಾಗ ಮಾನ್ಯ ಗುರುಸ್ವಾಮಿಯವರನ್ನೂ ಸಹ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಅನಂತರ, ಇದನ್ನು ನೋಡಿದ ಮೇಲೆ, ಇದಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯಾದ ತನಿಖೆ ಮಾಡಬೇಕೆಂದು ಮತ್ತು ಏನು ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಕೆಲಸವನ್ನು ನಾನು ಖಂಡಿತ ಮಾಡುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು he is frank to discuss ಚರ್ಚೆ ಮಾಡುತ್ತಾರೆ. ಅದರಲ್ಲಿ ಎರಡು ಮಾತಿಲ್ಲ. But the point is, why the officer is misleading my Minister. Why are they not looking into the matter?

Mr. SPEAKER: if there is anything, you please bring it to the notice of the minister

ಶ್ರೀ ಎ. ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಕ್ಯಾತಮಾರನ ಹಳ್ಳಿಯಲ್ಲಿ ನಂಬರ್ 1 ಮತ್ತು 2 ರಲ್ಲಿ 740 ಮನೆಗಳನ್ನು ಕಟ್ಟಿದ್ದಾರೆ. ತಾವು ಇದನ್ನು ಕಣ್ಣಾರೆ ನೋಡಿದರೆ ಅದು ಯಾವ ಸ್ಥಿತಿಯಲ್ಲಿವೆ ಎನ್ನತಕ್ಕಂಥದ್ದು ತಿಳಿಯುತ್ತದೆ. ನನ್ನ ಹತ್ತಿರ ಅದರ ಫೋಟೋ ಇದೆ. ತಾವು ಇದನ್ನು ನೋಡಬೇಕು. ಇವತ್ತಿನದಿವಸ ಅಲ್ಲಿರತಕ್ಕಂಥ ಎಲ್ಲಾ ಮನೆಗಳು ಕುಸಿದು ಹೋಗಿವೆ. They are wast quality buildings ಆದರೆ, ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. Is it good on their part? Does their consicence permit them? Anybody can see it. ಮೈಸೂರು ನಗರಕ್ಕೆ ಸಂಬಂಧಪಟ್ಟಂಥ ಮೂರು ಜನ ಶಾಸಕರು ಈ ಮನೆಯಲ್ಲಿದ್ದಾರೆ.

ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳುವುದೇನೆಂದರೆ, ಈ ರೀತಿ ಆಗುವುದಕ್ಕೆ ತಾವು ಅವಕಾಶ ಕೊಡಬಾರದು. I am prepared to discuss with him; I will give the evidence also we will sort out the the problem. ಅಲ್ಲಿ ಒಳ್ಳೆಯದಾಗಬೇಕೆಂಬುದು ನನ್ನ ಇಚ್ಛೆಯಾಗಿದೆ. ಇದರಲ್ಲಿ ಬೇರೆ ಉದ್ದೇಶ ಏನೂ ಇಲ್ಲ. ತಪ್ಪಿತಸ್ಥರ ವಿರುದ್ಧ ಎಷ್ಟು ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲಾಗಿದೆ ಮತ್ತು ಯಾರ ಯಾರ ವಿರುದ್ಧ ಹೂಡಲಾಗಿದೆ ಎಂದು ನಾನು ಕೇಳಿರತಕ್ಕಂಥ ಪ್ರಶ್ನೆಗೆ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಇವತ್ತಿನ ದಿವಸ ಇವರು ಬೇಕಾದಷ್ಟು ರಿಕವರಿ ಸೂಟ್ ಹಾಕಿದ್ದಾರೆ. ಹಾಗೆಯೇ ಡ್ಯಾಮೇಜ್ ಸೂಟ್‌ಗಳು ಈಗಾಗಲೇ ಬೇಕಾದಷ್ಟು ನರಳುತ್ತಾ ಬಿದ್ದಿವೆ. ಆದರೆ, ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಈ ರೀತಿ ಆದರೆ ಹೇಗೆ? Can you do it? why the Officers are not prepaing the statement properly? Minister is ready to take action. ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇದನ್ನು ರೆಕ್ಟಿಫೈ ಮಾಡಿಕೊಳ್ಳಬೇಕು In the better interest of the administration of public

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿಯವರೂ ಕೂಡ ಮೂಡಾ (ಎಂಯುಡಿಎ) ಸದಸ್ಯರಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಸ್ವಲ್ಪ ಏನೋ ಅಡಗಿದೆ ಎಂದು ಕಾಣುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಮಾಹಿತಿಗಳನ್ನು ಕಳುಹಿಸಿಕೊಡಲಿ. ಹಾಗೆಯೇ ನಾನು ಮೈಸೂರಿಗೆ ಹೋದಾಗ ಇವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ, ನಾನು ಕಣ್ಣಾರೆ ನೋಡಿದ ನಂತರ ಯಾವ ರೀತಿಯಾದ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಖಂಡಿತ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಕಳೆದ ಸರ್ಕಾರ ಆಶಾ ಮಂದಿರ ಎನ್ನತಕ್ಕಂಥ ಒಂದು ಯೋಜನೆಯನ್ನು ಜಾರಿಗೆ ತಂದಿತು. ಆದರೆ, ಅದು ನಿರಾಶ ಮಂದಿರ ಯೋಜನೆ ಆಗಿದೆ ಎಂದು ಹೇಳಿದರೆ ಏನೂ ತಪ್ಪು ಆಗಲಾರದು. ಅಲ್ಲಿ ಇರತಕ್ಕಂಥ ಮನೆಗಳಲ್ಲಿ ಭೂತ-ಪ್ರೇತಗಳೂ ಸಹ ವಾಸಮಾಡಲು ಯೋಗ್ಯವಿಲ್ಲದಂಥ ಪರಿಸ್ಥಿತಿಯಲ್ಲಿವೆ. ಈಗಾಗಲೇ ಕೆಲವು ಅರ್ಧಕ್ಕೆ ಕುಸಿದು ಬಿದ್ದಿವೆ. ಹಾಗೆಯೇ, ಕೆಲವು ಮನೆಗಳ ತಾರಸಿ ಕುಸಿದು ಬಿದ್ದು ಎಷ್ಟೋ ಜನರು ಸತ್ತಿದ್ದಾರೆ. ನಮ್ಮ ಊರಿನಲ್ಲಿ ಒಬ್ಬ ಗಾಣ ಇಟ್ಟಿದ್ದ. ಹಲ್ಲು ಇಲ್ಲದ ಗಾಣ ಮತ್ತು ತೂತು ಕೊಪ್ಪರಿಕೆ ಹಾಗೂ ಕಡಾಣಿ ಇಲ್ಲದ ಗಾಡಿ ಮತ್ತು ಕೊಂಬು ಇಲ್ಲದ ಎತ್ತುಗಳನ್ನು ಆತ ಇಟ್ಟಿದ್ದ. ಇವತ್ತಿನದಿವಸ ಮೂಡಾ ಪರಿಸ್ಥಿತಿ ಕೂಡ ಇದೇ ರೀತಿ ಆಗಿದೆ. ಆ ಸಂದರ್ಭದಲ್ಲಿ ಈ ಮನೆಗಳನ್ನು ಯಾರು ಕಟ್ಟಿದ್ದಾರೆ, ಅವರ ಮೇಲೆ ತನಿಖೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಆ ಮನೆಗಳನ್ನು ಸರಿಪಡಿಸಿದರೆ ಜನರು ಅಲ್ಲಿ ಬದುಕುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸರ್ವಜ್ಞನ ವಚನ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ,

"ಬೆಚ್ಚನೆಯ ಮನೆಯಾಗಿ, ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನ್ನು ಅರಿತ ನಡೆದ ಸತಿಯಾಗಿ ನೆಚ್ಚಿನ
ಸ್ವರ್ಗಕ್ಕೆ ಕಿಚ್ಚು ಹಚ್ಚಿಂದ ಸರ್ವಜ್ಞ"

ಇವತ್ತಿನ ದಿವಸ ಅಲ್ಲಿ ಬೆಚ್ಚನೆ ಮನೆಯಾಗಿಲ್ಲ. ತಲೆಯ ಮೇಲೆ ಬಿದ್ದು ನಮ್ಮನ್ನು ಮುಗಿಸುವಂಥ

ಮನೆಗಳಾಗಿವೆ. ಮಾನ್ಯ ಸಚಿವರು ಯುವಕರಿದ್ದಾರೆ. ಆದ್ದರಿಂದ ಇದರ ಬಗ್ಗೆ ತನಿಖೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ ತಾಂತ್ರಿಕವಾಗಿ ಉತ್ತರ ಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಮಾನ್ಯ ಗುರುಸ್ವಾಮಿಯವರು ಮೈಸೂರು ಮಹಾನಗರಸಭೆಗೆ ಸಂಬಂಧಪಟ್ಟಂಥ ಪ್ರಶ್ನೆಯನ್ನು ಕೇಳಿದ್ದಾರೆ. ಆಶಾ ಮಂದಿರ ಮತ್ತು ಸ್ವಂತ ಮನೆ ಹೊಂದಿಕೆ ಯೋಜನೆ ಅಡಿಯಲ್ಲಿ ಸುಮಾರು 1474 ಮನೆಗಳನ್ನು ನಿರ್ಮಾಣ ಮಾಡಬೇಕಾಗಿತ್ತು. ಸದರಿ ಕೆಲಸಗಳೆಲ್ಲವೂ ಕೂಡ ಅರ್ಧಕ್ಕೆ ನಿಂತು ಹೋಗಿದೆ. ಇದರಲ್ಲಿ ಸುಮಾರು 14 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ಆಗಿದೆ ಎನ್ನತಕ್ಕಂಥದ್ದು ತನ್ನಿಂತಯಿಂದ ತಿಳಿದು ಬಂದಿದೆ. ಈ ರೀತಿಯಾದ ಪ್ರಶ್ನೆಯನ್ನು ತಾವು ಕೇಳಿದ್ದೀರಲ್ಲಾ ಎಂದು ನಾನು ಮಾನ್ಯ ಸದಸ್ಯರಿಗೆ ಕೇಳಿದೆ. ನಾನು ಅಧ್ಯಕ್ಷರ ಭಯದಿಂದ ನಾನು ಶಾಸಕನಾದ ಮೇಲೆ ಏನಾಗಿದೆ ಅಂದರೆ, 1999 ರಿಂದ ಈಚೆಗೆ ಆಗಿರತಕ್ಕಂಥ ಕೆಲಸದ ಬಗ್ಗೆ ಮಾತ್ರ ಕೇಳಿದ್ದೇನೆ ಎಂದು ಹೇಳಿದರು. ಮಾನ್ಯ ಸಚಿವರು ಸಹ 1999 ರಿಂದ ಈಚೆಗೆ ಆಗಿರತಕ್ಕಂಥದರ ಬಗ್ಗೆ ಮಾತ್ರ ಉತ್ತರ ಕೊಟ್ಟಿದ್ದಾರೆ. ಆದರೆ, 1999ರಿಂದ ಈಚೆಗೆ ಅಲ್ಲಿ ಏನೂ ಆಗಿಲ್ಲ. ಆದರೆ, ಹಿಂದೆ ಆಗಿರತಕ್ಕಂಥ ಪ್ರಕರಣಗಳಿಗೆ ಸಂಬಂಧಪಟ್ಟಂಥ ವಿಚಾರಗಳು ಮಾನ್ಯ ಗುರುಸ್ವಾಮಿಯವರಿಗೆ ಗೊತ್ತಿದೆ. 1474 ಮನೆಗಳು ಅರ್ಧಕ್ಕೆ ನಿಂತು ಹೋಗಿದೆ. ಇದೊಂದು ದೊಡ್ಡ ಪ್ರಕರಣವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಹಿಂದಿನ ಕಾರ್ಯದರ್ಶಿಯವರು ಒಂದು ಎನ್‌ಕ್ವೆಯರಿ ಕಮಿಷನ್ ಮಾಡಿದ್ದರು. ಆದ್ದರಿಂದ ಸದರಿ ಮನೆಗಳನ್ನು ಜನರಿಗೆ ಕೊಡುವಂಥ ದೃಷ್ಟಿಯಲ್ಲಿ ಮಾನ್ಯ ನಗರಾಭಿವೃದ್ಧಿ ಕಾರ್ಯದರ್ಶಿಯವರು ಕ್ರಮ ತೆಗೆದುಕೊಂಡಿದ್ದಾರೆ. ಈ ಕೆಲಸ ತಕ್ಷಣ ಆಗಬೇಕೆಂಬುದು ನನ್ನ ಉದ್ದೇಶವಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೂ ಕೂಡ ಹಿಂದೆ ಸದಸ್ಯರಾಗಿದ್ದರು. ನಿಮ್ಮ ಕಾಲ ಅಲ್ಲ. ಬೇರೆಯವರ ಕಾಲ ನೀವು ಸದಸ್ಯರಾಗಿದ್ದೀರಿ ಅಷ್ಟೆ. ಈಗ ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಚಾರವನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಡಾ. ಭಾರತಿ ಶಂಕರ್: ಮಾನ್ಯ ಅಧ್ಯಕ್ಷರೆ, ಮೂಡಾ ಗೆ ನಾನೂ ಕೂಡ ಸದಸ್ಯನಾಗಿರುವುದರಿಂದ, ಅದಕ್ಕೆ ಸಂಬಂಧಪಟ್ಟಂತೆ ನಾನೊಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಮೈಸೂರು ಸಿಟಿಗೆ ಸಂಬಂಧಪಟ್ಟಿದೆ. ಇದು ನಿಮ್ಮ ಜ್ಯೂರಿಸ್‌ಡಿಕ್ಷನ್ ಬರುತ್ತದೆಯೆ?

ಡಾ. ಭಾರತಿ ಶಂಕರ್: ನನ್ನ ಜ್ಯೂರಿಸ್‌ಡಿಕ್ಷನ್‌ಗೆ ಬರುತ್ತದೆ.

ಅಧ್ಯಕ್ಷರು: ಹಾಗಾದರೆ ಪ್ರಶ್ನೆ ಕೇಳಿ.

ಡಾ. ಭಾರತಿ ಶಂಕರ್: ಮಾನ್ಯ ಅಧ್ಯಕ್ಷರೆ, ಕಳೆದ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಬಹು ದೊಡ್ಡ ಹಗರಣ ಮೈಸೂರು ಸುತ್ತಮುತ್ತಲೂ ನಡೆದಿದೆ. ಇದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೂ ಕೂಡ ತಂದಿದ್ದೇನೆ. ನಗರಾಭಿವೃದ್ಧಿ ಇಲಾಖೆಗೆ ಬೆಟರ್‌ಮೆಂಟ್ ಶುಲ್ಕ ಮತ್ತು ಸ್ಟಾಂಪ್ ಡ್ಯೂಟಿಯಿಂದ ಸುಮಾರು 50 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಇದಕ್ಕೆ

ಕಾರಣರಾಗಿರತಕ್ಕಂಥ ವ್ಯಕ್ತಿಗಳನ್ನು ನಾನು ಅನೇಕ ಸಲ ಹೇಳಿದ್ದೇನೆ. ಆದ್ದರಿಂದ, ಇವರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದನ್ನು ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಪ್ರತ್ಯೇಕವಾದ ದೂರನ್ನು ಕೊಟ್ಟರೆ, ನಾನು ಅದರ ಬಗ್ಗೆ ತನಿಖೆ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಮಲ್ಲಿಕಾರ್ಜುನರವರ ಪ್ರಶ್ನೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಸದನ ಇನ್ನೂ ಎರಡು ವಾರಗಳ ಕಾಲ ನಡೆಯುತ್ತದೆ. ಅಷ್ಟರೊಳಗೆ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಬೆಂಗಳೂರಿನ ಭುವನೇಶ್ವರಿ ನಗರದಲ್ಲಿ ಟಾರು ರಸ್ತೆ ಮಾಡುವ ಬಗ್ಗೆ

154 (1326) - ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ್) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 55ಕ್ಕೆ ಸೇರಿದ ಭುವನೇಶ್ವರಿ ನಗರದ ಕೆಲವು ಕಡೆ ಮಹಾನಗರ ಪಾಲಿಕೆಯವರು ಟಾರು ರಸ್ತೆ ಮಾಡಿರುವುದು ನಿಜವೆ?

ಆ) ಈ ರೀತಿ ರಸ್ತೆ ಮಾಡುವಾಗ ಸದರಿ ಪ್ರದೇಶದ ಐಶ್ವರ್ಯ ವಾಟರ್ ಸಪ್ಲೈ ಮುಂದಿನ ರಸ್ತೆ ಹಾಗೂ ಅದರ ಸಮಾನಾಂತರ ರಸ್ತೆಗಳಿಗೆ ಟಾರು ಹಾಕದೆ ಸಾಮಾಜಿಕ ಅಸಮಾನತೆ ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಪ್ರದೇಶದ ಬಹುಪಾಲು ಜನ ಅಭಿವೃದ್ಧಿ ಶುಲ್ಕ ಹಾಗೂ ಆಸ್ತಿ ತೆರಿಗೆಗಳನ್ನು ನೀಡುತ್ತಾ ಇದ್ದರೂ ಈ ಅಸಮಾನತೆಯಿಂದಾಗಿ ಅವರಿಗೆ ಅನ್ಯಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈಗ ಬಿಟ್ಟು ಹೋಗಿರುವ ಈ ರಸ್ತೆಗಳಿಗೆ ಕೂಡಲೇ ರಸ್ತೆ ಬದಿ ಮೋರಿ ನಿರ್ಮಿಸಿ ಟಾರು ಹಾಕಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಹೌದು ಭುವನೇಶ್ವರಿ ನಗರವು ಮಹಾನಗರ ಪಾಲಿಕೆಗೆ 1996 ರಲ್ಲಿ ಸೇರಿದ್ದು ಇದುವರೆವಿಗೂ ಈ ಪ್ರದೇಶಕ್ಕೆ ರೂ. 13,00,000 ಖರ್ಚು ಮಾಡಿದ್ದು, ಬುವನೇಶ್ವರಿ ನಗರ ಮುಖ್ಯ ರಸ್ತೆ ಹಾಗೂ ಅಕ್ಕಪಕ್ಕದ ರಸ್ತೆಗಳಿಗೆ ಡಾಂಬರು ಕೆಲಸವನ್ನು ಮಾಡಿ ಮುಗಿಸಲಾಗಿದೆ.

ಆ) ಹೌದು ಸದರಿ ಪ್ರದೇಶದ ಐಶ್ವರ್ಯ ವಾಟರ್ ಸಪ್ಲೈ ಮುಂದಿನ ಹಾಗೂ ಅದರ ಸಮಾನಾಂತರ ರಸ್ತೆಗಳಿಗೆ 2000-03 ನೇ ಸಾಲಿನ ಕಾರ್ಯಕ್ರಮದಲ್ಲಿ ಟೆಂಡರ್ ಕರೆಯಲಾಗಿದ್ದು, ಮಳೆಗಾಲ ಮುಗಿದ ನಂತರ ಟಾರು ಕೆಲಸವನ್ನು ಪ್ರಾರಂಭಿಸಲಾಗುವುದು. ಸಾಮಾಜಿಕ ಅಸಮಾನತೆ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಭುವನೇಶ್ವರಿ ನಗರದ ನಾಗರೀಕರಿಗೆ ಯಾವುದೇ ರೀತಿಯ ಅಸಮಾನತೆ ಆಗಿರುವುದಿಲ್ಲ. ಅವಶ್ಯಕ ಅಭಿವೃದ್ಧಿ ಕೆಲಸಗಳನ್ನು ಮಹಾನಗರ ಪಾಲಿಕೆಯಿಂದ ಕೈಗೊಂಡಿದ್ದು, ಅವುಗಳಲ್ಲಿ ಹಲವು ಕೆಲಸವನ್ನು ಮುಗಿಸಲಾಗಿದೆ ಹಾಗೂ ಇನ್ನು ಮುಂದೆಯೂ ಸಹ ಅವಶ್ಯ ಕೆಲಸಗಳನ್ನು ತೆಗೆದುಕೊಂಡು ಮುಗಿಸಲಾಗುವುದು